**ಇಂದು ದಿಃ21-11-2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

ಮುಖ್ಯ ವಿಚಾರಣೆ: ಶ್ರೀ ಎಂ.ಕೆ. ವಕೀಲರಿಂದ 19 ಮತ್ತು 20 ನೇ ಪ್ರತಿವಾದಿಯ ಪರ:

**ನಾನು, ನನ್ನ ಮುಖ್ಯ ವಿಚಾರಣೆಯ ಅಂಶಗಳನ್ನು ಪ್ರಮಾಣ ಪತ್ರದ ರೂಪದಲ್ಲಿ ಸಲ್ಲಿಸಿದ್ದು, ಅದರಲ್ಲಿ ಬರೆದ ಸಂಗತಿಗಳು ಸತ್ಯವಾಗಿರುತ್ತವೆ.**

ಈಗಾಗಲೇ ಪ್ರಾ.ಸ 1 ಇವರ ಪಾಟೀ ಸವಾಲಿನಲ್ಲಿ ನಿ.ಡಿ-1 ರಿಂದ 4 ನ್ನು ನಾನು ನಮ್ಮ ಪರವಾಗಿ ಗುರುತಿಸಿಕೊಂಡಿರುತ್ತೇನೆ.

ನಾನು ದಿನಾಂಕಃ27-03-2008 ರ ಡಿ.ಸಿ ದಾವಣಗೆರೆ ಇವರ ಹಿಂಬರಹದ ದೃಢೀಕೃತ ನಕಲನ್ನು ಹಾಜರುಪಡಿಸಿದ್ದು, ಅದನ್ನು ನಿ.ಡಿ-5 ಎಂದು, ದಿನಾಂಕಃ28-06-2008 ರ ಡಿ.ಸಿ ದಾವಣಗೆರೆ ಇವರ ಅಧಿಕೃತ ಜ್ಞಾಪನ ಪತ್ರವನ್ನು ನಿ.ಡಿ-6 ಎಂದು, ಅಸಲು ದಾವಾ ನಂಬರ್ 54/1996 (ಹೊಸ ನಂಬರ್ 14/2002) ರ ಪೂರ್ಣ ಆದೇಶ ಪುಟದ ದೃ.ನಕಲನ್ನು ನಿ.ಡಿ-7 ಎಂದು, ಸದರಿ ದಾವೆಯ ವಾದ ಪತ್ರ, ಆ ದಾವೆಯ 1 ಮತ್ತು 2 ನೇ ಪ್ರತಿವಾದಿಯರು ಸಲ್ಲಿಸಿದ ತಕರಾರು, ವಿವಾದಾಂಶ ಇವುಗಳ ದೃ.ನಕಲುಗಳನ್ನು ಹಾಜರುಪಡಿಸಿದ್ದು, ಅವುಗಳನ್ನು ಕ್ರಮವಾಗಿ ನಿ.ಡಿ-8 ರಿಂದ 10 ಎಂದು ಗುರುತಿಸಲಾಯಿತು.

ಅಸಲು ದಾವಾ ನಂಬರ್ 14/2002 ರಲ್ಲಿ ಸಲ್ಲಿಸಿದ ರಾಜೀ ಪತ್ರ, ವಕೀಲರ ಪ್ರಮಾಣಪತ್ರದ ದೃ.ನಕಲುಗಳನ್ನು ಹಾಜರುಪಡಿಸಿದ್ದು, ಅವುಗಳನ್ನು ಕ್ರಮವಾಗಿ ನಿ.ಡಿ-11 ಮತ್ತು 12 ಎಂದು ಗುರುತಿಸಲಾಯಿತು.

ದಿನಾಂಕಃ13-08-2008 ರ 3 ಮೂಲ ಕ್ರಯಪತ್ರಗಳನ್ನು ಕ್ರಮವಾಗಿ ನಿ.ಡಿ-13 ರಿಂದ 15 ಎಂದು ಗುರುತಿಸಲಾಯಿತು. ನಾನು 10 ನೇ ಪ್ರತಿವಾದಿ ಹೆಚ್. ಶಿವಪ್ಪ ಇವರಿಗೆ ಮಾಡಿಕೊಟ್ಟ ನೊಂದಾಯಿತ ಮೂಲ ಜಿ.ಪಿ.ಎ

ಹಾಜರುಪಡಿಸಿದ್ದು, ಅದನ್ನು ನಿ.ಡಿ-16 ಎಂದು ಗುರುತಿಸಲಾಯಿತು. ಖರೀದಿ ಮಾಡಿದ ಜಮೀನು ಈಗ ನಮ್ಮ ಟ್ರಸ್ಟ್ ಹೆಸರಿನಲ್ಲಿ ಇರುವ ಬಗ್ಗೆ ಚಾಲ್ತಿ ಪಹಣಿಯನ್ನು ಹಾಜರುಪಡಿಸಿದ್ದು, ಅದನ್ನು ನಿ.ಡಿ-17 ಎಂದು ಗುರುತಿಸಲಾಯಿತು.

ವಾದಿಯರ ದಾವೆಯನ್ನು ವಜಾ ಮಾಡಬೇಕೆಂದು ಕೋರಿಕೊಳ್ಳುತ್ತೇನೆ.

ಪಾಟೀ ಸವಾಲಿಗೆ ವಾದಿ ಪರ ವಕೀಲರು ಸಮಯಕೇಳಿದ್ದು, ನೀಡಲಾಯಿತು.

(ತೆರೆದ ನ್ಯಾ. ದಲ್ಲಿ ಸಾಕ್ಷಿ ಹೇಳಿಕೆಯಂತೆ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಪಡಿಸಿದೆ).

ಓ ಹೇ ಕೇ ಸರಿ ಇದೆ.

ಸಹಿ/-
**ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು**
**ಜೆ.ಎಂ.ಎಫ್.ಸಿ, ಹರಿಹರ.**